ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಮಾನ್ಯ ಸಮಾಜ ಕಲ್ಯಾಣ ಸಚಿವರು):–

ಅ) ಧಾರವಾಡ ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟು 3 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ.

ಆ) ಈ ವಸತಿ ಶಾಲೆಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಪ್ರಾರಂಭಿಸಿದೆ.

ತಾಲ್ಲೂಕು	ಸ್ಥಳ	ವರ್ಗ
1. ಧಾರವಾಡ	ಹುಬ್ಬಳ್ಳಿ	ಪರಿಶಿಷ್ಟ ಜಾತಿ
2. ಹುಬ್ಬಳ್ಳಿ	ಹುಬ್ಬಳ್ಳಿ	ಅಲ್ಪಸಂಖ್ಯಾತ
3. ಹುಬ್ಬಳ್ಳಿ	ಹುಬ್ಬಳ್ಳಿ	ಅಲ್ಪಸಂಖ್ಯಾತ

ಇ) ಈ ಭಾಗದ ಬೇಡಿಕೆ, ವಿದ್ಯಾರ್ಥಿಗಳ ಲಭ್ಯತೆ, ಆಯವ್ಯಯದಲ್ಲಿ ಹಣದ ಲಭ್ಯತೆ ಮತ್ತು ಡಾ॥ ನಂಜುಂಡಪ್ಪ ರವರ ವರದಿಯಲ್ಲಿನ ಹಿಂದುಳಿದ ತಾಲ್ಲೂಕುಗಳಿಗೆ ಆದ್ಯತೆ ಇವುಗಳನ್ನು ಗಮನದಲ್ಲಿಟ್ಟುಕೊಂಡು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಬೇಕಾಗಿದೆ.

ಈ ಭಾಗದ ಬೇಡಿಕೆ, ವಿದ್ಯಾರ್ಥಿಗಳ ಲಭ್ಯತೆ, ಆಯವ್ಯಯದಲ್ಲಿ ಹಣದ ಲಭ್ಯತೆ ಮತ್ತು ಡಾ॥ ನಂಜುಂಡಪ್ಪರವರ ವರದಿಯಲ್ಲಿನ ಹಿಂದುಳಿದ ತಾಲ್ಲೂಕುಗಳಿಗೆ ಆಧ್ಯತೆ ಇವುಗಳನ್ನು ಗಮನದಲ್ಲಿಟ್ಟುಕೊಂಡು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಬೇಕಾಗಿದೆ.

ಗಂಗಾ ಕಲ್ಯಾಣ ಯೋಜನೆ ಅನುಷ್ಠಾನ

1107 (1267) ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ :– ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) 2005–06, 2006–07ನೇ ಸಾಲಿನಲ್ಲಿ ಕಲಘಟಗಿ ಮತಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ/ಪಂಗಡ, ಹಿಂದುಳಿದ ಅಲ್ಪಸಂಖ್ಯಾತರ ಇಲಾಖೆಯಿಂದ ಮಂಜೂರಾದ ಹಾಗೂ ಕೊರೆದಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ;

ಆ) ಅವುಗಳಲ್ಲಿ ವಿದ್ಯುತ್ ಸರಬರಾಜು ಮಾಡಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ;

ಇ) ಪ್ರತಿ ವರ್ಷ ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಬೇಕಾಗಿರುವ ಕಾಲಾವಧಿ ಎಷ್ಟು ;

ಈ) ಈ ಯೋಜನೆಯಡಿಯಲ್ಲಿ ಪ್ರತಿಯೊಬ್ಬ ಫಲಾನುಭವಿಗೆ ಒದಗಿಸಿಕೊಡಲಾಗುತ್ತಿರುವ ಸೌಲಭ್ಯಗಳ ವಿವರಗಳೇನು ?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಮಾನ್ಯ ಸಮಾಜ ಕಲ್ಯಾಣ ಸಚಿವರು):–

ಅ) ಕಲಘಟಗಿ ವಿಧಾನ ಸಭಾ ಕ್ಷೇತ್ರದಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಮಂಜೂರು ಮಾಡಿದ ಹಾಗೂ ಕೊರೆಯಿಸಿದ ಕೊಳವೆ ಬಾವಿಗಳ ವಿವರ ಕೆಳಗಿನಂತಿದೆ.

ನಿಗಮ	ವರ್ಷ	ಮಂಜೂರಾತಿ ನೀಡಿದ ಕೊಳವೆ ಬಾವಿಗಳ ಸಂಖ್ಯೆ	ಕೊರೆದ ಕೊಳವೆ ಬಾವಿಗಳ ಸಂಖ್ಯೆ
1. ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ	2005–06	16	23 (ಹೆಚ್ಚುವರಿ ಗುರಿ ಸೇರಿ)
	2006–07	25	23
2. ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ	2005–06	7	7
	2006–07	12	12

			ಇತ್ತೀಚೆಗೆ ಕೊರೆಯಿಸ- ಲಾಗಿರುತ್ತದೆ. ಇವುಗಳಿಗೆ ಪಂಪು ಮೋಟಾರು ಹಾಗೂ ಸಾಮಗ್ರಿಗಳನ್ನು ಒದಗಿಸಬೇಕಾಗಿರುತ್ತದೆ.
3. ಕರ್ನಾಟಕ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ	2005–06	03	
	2006–07	–	
4. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ	2005–06	1	2006–07ನೇ ಸಾಲಿನಲ್ಲಿ
	2006–07	–	ಕೊರೆದಿರುವ ಕೊಳವೆ ಬಾವಿಗಳಿಗೆ ಠೇವಣಿ ಹಣವನ್ನು

ಯೋಜನೆಗೆ ನಿಗದಿಪಡಿಸಿದ ಘಟಕದ ಮೊತ್ತದಿಂದ ಕೊಳವೆಬಾವಿಗಳನ್ನು ಕೊರೆಯಿಸಿ, ಪಂಪು, ಮೋಟಾರು ಹಾಗೂ ಸಾಮಾಗ್ರಿಗಳನ್ನು ಸರಬರಾಜು ಮಾಡಿ ಹಾಗೂ ವಿದ್ಯುತ್ ಠೇವಣಿ ಮೊತ್ತ ಪಾವತಿಸಲಾಗುತ್ತಿದೆ. ವೈಯಕ್ತಿಕ ಯೋಜನೆಯಲ್ಲಿ ಘಟಕ ಪೂರ್ಣಗೊಳಿಸಲು ಹಣದ ಕೊರತೆ ಉಂಟಾಗುವ ಪ್ರಕರಣಗಳಲ್ಲಿ ಫಲಾನುಭವಿಗಳು ಸಾಲಕ್ಕಾಗಿ ಅರ್ಜಿ ಸಲ್ಲಿಸಿದ್ದಲ್ಲಿ ನಿಗಮದಿಂದ ಶೇಕಡಾ 4ರ ಬಡ್ಡಿ ದರದಲ್ಲಿ 14,000 ರೂ.ಗಳವರೆಗೆ ಸಾಲ ಮಂಜೂರು ಮಾಡಲಾಗುತ್ತಿದೆ. ಸಾಮೂಹಿಕ ಯೋಜನೆಗೆ ನಿಗದಿಪಡಿಸಿದ ಘಟಕದ ಮೊತ್ತದಲ್ಲಿ ಮೇಲಿನಂತೆ ಸೌಲಭ್ಯ ನೀಡಿದ ನಂತರ ಹಣ ಉಳಿತಾಯಗೊಂಡಲ್ಲಿ ಘಟಕದಲ್ಲಿ ಒಳಪಡುವ ಫಲಾನುಭವಿಗಳ ಜಮೀನುಗಳಿಗೆ ನೀರು ಹಾಯಿಸಲು ಪಿ.ವಿ.ಸಿ ಪೈಪ್‌ಲೈನ್ ನಿರ್ಮಿಸಲಾಗುವುದು. ನಿಗದಿಪಡಿಸಿದ್ದು ಇದರಲ್ಲಿ ರೂ. 86,000 ಸಹಾಯಧನ, ಉಳಿಕೆ ಹಣ ರೂ. 14,000 ಅವಧಿ ಸಾಲವನ್ನು NSTFDC ಯೋಜನೆಯಡಿ ನಿಗಮ ಮಂಜೂರು ಮಾಡುತ್ತದೆ. ಇದರಲ್ಲಿ ಕೊಳವೆಬಾವಿ ಕೊರೆಯುವ ವೆಚ್ಚ, ಪಂಪ್‌ಸೆಟ್, ವಿದ್ಯುದ್ದೀಕರಣ ಹಾಗೂ ಪೂರಕ ಸಾಮಾಗ್ರಿಗಳ ಸರಬರಾಜು ಮತ್ತು ಅಳವಡಿಕೆ ವೆಚ್ಚ ಸೇರಿರುತ್ತದೆ.

4. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ :–

2005–06 ಗಂಗಾ ಕಲ್ಯಾಣ ಯೋಜನೆಯಡಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ವೈಯಕ್ತಿಕ ಕೊಳವೆ ಬಾವಿ ಯೋಜನೆಯ ಘಟಕ ವೆಚ್ಚ ರೂ. 65,000 ಗಳಾಗಿದ್ದು, ಇದರಲ್ಲಿ ಕೊಳವೆ ಬಾವಿ ಕೊರೆಯುವಿಕೆ ಮತ್ತು ಪಂಪ್‌ಸೆಟ್ ಸರಬರಾಜು ಮಾಡಲಾಗುತ್ತಿದೆ. ನಿಗಮದಿಂದ ಕೊರೆದ ಕೊಳವೆ ಬಾವಿಗಳಿಗೆ ಫಲಾನುಭವಿಗಳು ಠೇವಣಿ ಹಣವನ್ನು ಭರಿಸದೆ ಇರುವುದರ ಕಾರಣ ವಿದ್ಯುದ್ದೀಕರಣಗೊಳಿಸಲು ವಿಳಂಬವಾಗುತ್ತಿರುವುದನ್ನು ಗಮನಿಸಿ ವಿದ್ಯುದ್ದೀಕರಣದ ಠೇವಣಿ ಮೊತ್ತವನ್ನು ಸರ್ಕಾರವೇ ಹೆಚ್ಚುವರಿಯಾಗಿ ಹಣವನ್ನು ಬಿಡುಗಡೆ ಮಾಡಿ ವಿದ್ಯುತ್ ಠೇವಣಿ ಮೊತ್ತವನ್ನು ಭರಿಸಲಾಗುತ್ತಿದೆ. 2006–07ನೇ ಸಾಲಿನಿಂದ ರೂ. 86,000ಗಳ ವರೆವಿಗೆ ಘಟಕ ವೆಚ್ಚವನ್ನು ಹೆಚ್ಚಿಸಿದ್ದು, ಇದರಲ್ಲಿ ಕೊಳವೆ ಬಾವಿ ಕೊರೆಯುವಿಕೆ, ಪಂಪ್‌ಸೆಟ್ ಸರಬರಾಜು ಮತ್ತು ವಿದ್ಯುದ್ದೀಕರಣದ ಠೇವಣಿ ಮೊತ್ತವನ್ನು ಭರಿಸಲಾಗುತ್ತಿದೆ. ಫಲಾಭವಿಯು ಹೆಚ್ಚುವರಿಯಾಗಿ ಇತರೆ ಸಾಮಾಗ್ರಿಗಳನ್ನು ಕೊಳ್ಳಲು ಭಯಸಿದ್ದಲ್ಲಿ ಅಂತವರಿಗೆ ರೂ. 14,000ಗಳ ವರೆವಿಗೆ ಸಾಲವನ್ನು ನೀಡಲಾಗುವುದು.